**ಕರ್ನಾಟಕ ಸರ್ಕಾರ**

ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/157/ಕಂ.ತ/2015-16/ ಬಸ್ಥಾವಿ/ಭಾಗ-2

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 20.09.2016

**ಸುತ್ತೋಲೆ**

ವಿಷಯ : ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹಾಯಕ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ನಿರ್ದೇಶಕರು/ಗ್ರಂಥಪಾಲಕರುಗಳ ಎ.ಜಿ.ಪಿ. ಮಂಜೂರಾತಿಯ ಬಗ್ಗೆ.

** ** **

ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಕೆಳಕಂಡ ಅಂಶಗಳ ಬಗ್ಗೆ ವೈಯಕ್ತಿಕ ಗಮನಹರಿಸಿ ಅವುಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ತಿಳಿಸಲಾಗಿದೆ.

1. 2006ರ ಯುಜಿಸಿ ವೇತನ ಶ್ರೇಣಿಗಳಲ್ಲಿ ಸಹ ಪ್ರಾಧ್ಯಾಪಕರು/ದೈಹಿಕ ಶಿಕ್ಷಣ ನಿರ್ದೇಶಕರು/ಗ್ರಂಥಪಾಲಕರುಗಳಿಗೆ ಎ.ಜಿ.ಪಿ. ಮಂಜೂರಾತಿ ಸಂಬಂಧದಲ್ಲಿ ಪ್ರಾಂಶುಪಾಲರ ಹಂತದ ಸಮಿತಿಯಲ್ಲಿ ಮೂಲ ಸೇವಾ ಪುಸ್ತಕ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಿ ನಿಗದಿತ ನಮೂನೆಯಲ್ಲಿ (ಭಾಗ-1 ಸಾಮಾನ್ಯ ಮಾಹಿತಿ ಹಾಗೂ ಭಾಗ-2 ಎ.ಪಿ.ಐ. ವಿವರಗಳ ಸಮಿತಿಯ ವರದಿ) ಅರ್ಹರಿರುವವರ ಸ್ಪಷ್ಟವಾದ ಮಾಹಿತಿಗಳನ್ನು ಮಾತ್ರ ಸಲ್ಲಿಸುವಂತೆ ಈ ಕಛೇರಿಯ ಸುತ್ತೋಲೆ ಸಂಖ್ಯೆ : ಕಾಶಿಇ/16/ಸಿಎಸ್/2015-16/ಬಸ್ಥಾವಿ, ದಿನಾಂಕ : 03.10.2015ರಲ್ಲಿ ತಿಳಿಸಲಾಗಿರುತ್ತದೆ. ಆದರೆ ಕೆಲವು ಕಾಲೇಜುಗಳಿಂದ ಪ್ರಸ್ತಾವನೆಯೊಂದಿಗೆ ಮೂಲ ಸೇವಾ ಪುಸ್ತಕಗಳನ್ನು ಕಳುಹಿಸಲಾಗಿರುತ್ತದೆ. ಆದುದರಿಂದ ಇನ್ನು ಮುಂದೆ ಭಾಗ-1 & 2 ರ ಪ್ರಸ್ತಾವನೆಯನ್ನು ಮಾತ್ರ ಸಲ್ಲಿಸತಕ್ಕದ್ದು . (ಮೂಲ ಸೇವಾ ಪುಸ್ತಕ ಹಾಗೂ ದಾಖಲಾತಿಗಳನ್ನು ಕಾಲೇಜಿನಲ್ಲಿಯೇ ಸಂರಕ್ಷಿಸತಕ್ಕದ್ದು)
2. ಎ.ಜಿ.ಪಿ. ಮಂಜೂರಾತಿ ಆದೇಶ ಹೊರಡಿಸಿದ ನಂತರ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ವೇತನ ನಿಗದೀಕರಣದ ಪ್ರಸ್ತಾವನೆಯನ್ನು ಮಹಾಲೇಖಪಾಲರಿಗೆ ಕಳುಹಿಸಿದ ನಂತರ ಅದರ ಪ್ರತಿಯನ್ನು ಕೇಂದ್ರ ಕಛೇರಿಗೆ ಕಳುಹಿಸದೇ ಕಾಲೇಜಿನಲ್ಲಿಯೇ ಕಡತಗೊಳಿಸತಕ್ಕದ್ದು.
3. ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಹ ಪ್ರಾಧ್ಯಾಪಕರು, ದೈಹಿಕ ಶಿಕ್ಷಣ ನಿರ್ದೇಶಕರು ಹಾಗೂ ಗ್ರಂಥಪಾಲಕರುಗಳ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಮಾಹಿತಿಯನ್ನು ಕೇಂದ್ರ ಕಛೇರಿಗೆ ಕಳುಹಿಸದೇ ಆಯಾ ಕಾಲೇಜುಗಳಲ್ಲಿಯೇ ಸಂಬಂಧಪಟ್ಟವರ ವೈಯಕ್ತಿಕ ಕಡತಗಳಲ್ಲಿ ಸಂರಕ್ಷಿಸತಕ್ಕದ್ದು.
4. ತಮ್ಮ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂಧಿಗಳು ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ಬಗ್ಗೆ ಮಾಹಿತಿಯನ್ನು EMIS ತಂತ್ರಾಂಶದಲ್ಲಿ ದಾಖಲಿಸಲು ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

**ಇವರಿಗೆ** :

ಇಲಾಖಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

**ಪ್ರತಿಯನ್ನು** :

ಮಾಹಿತಿ ಅಧಿಕಾರಿಗಳು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು (ಮೇಲ್ಕಂಡ ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಹಾಗೂ EMIS ತಂತ್ರಾಂಶದಲ್ಲಿ ಕಂಪ್ಯೂಟರ್ ಸಾಕ್ಷರತಾ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಬಗ್ಗೆ ಮಾಹಿತಿಯನ್ನು ದಾಖಲಿಸುವ ಸಂಬಂಧದಲ್ಲಿ ಅಗತ್ಯ ಕ್ರಮಕ್ಕಾಗಿ).

*DCE-157-Computer Exam.docx*